# ಬಾಲ ಭೀಮ!






**ಚೀನಾದ ಲು ಹೋ** ಎಂಬ ಈ ಪುಟ್ಟ ಬಾಲಕನನ್ನು ಅಪ್ಪಿ ತಪ್ಪಿ ನೀವು ಎತ್ತಿಕೊಳ್ಳಲು ಹೋದರೆ ಬೆವರುವುದು ಖಂಡಿತಾ! ಮೂರು ವರ್ಷದ ಈತ ತನ್ನ ವಾರಿಗೆಯ ಮಕ್ಕಳಿಗಿಂತ ಬರೋಬ್ಬರಿ ಐದು ಪಟ್ಟು ಜಾಸ್ತಿ ತೂಕವಂತ! ಈತನ ತೂಕ 60 ಕೆ.ಜಿ!

ಹುಟ್ಟಿದಾಗ ಕೇವಲ 2.6 ಕೆ.ಜಿಯಷ್ಟಿದ್ದ ಈತನ ತೂಕ ಮೂರು ತಿಂಗಳಾದ ಬಳಿಕ ಒಂದೇ ಒಂದೇ ಸಮ ಏರುತ್ತಾ ಹೋಯಿತಂತೆ. ಈಗ ಒಂದು ಹೊತ್ತಿಗೆ 3 ತಟ್ಟೆ ಅನ್ನ ಈತನ ಹೊಟ್ಟೆಗೆ ಬೇಕು. ಇದು ಅವನ ಅಮ್ಮ, ಅಪ್ಪ ಇಬ್ಬರೂ ಸೇರಿ ತಿನ್ನುವುದಕ್ಕಿಂತ ತುಸು ಜಾಸ್ತಿಯೇ. ವಿಪರೀತ ತೂಕ ಏರುತ್ತಿರುವುದನ್ನು ನೋಡಿ ಗಾಬರಿಗೊಂಡ ತಾಯಿ, ಒಂದು ವರ್ಷದ ಮಗುವಿದ್ದಾಗಲೇ ಡಯಟ್ ಮಾಡಿಸೋಣವೆಂದು ಕಡಿಮೆ ಊಟ ನೀಡಲು ಶುರು ಮಾಡಿದಳಂತೆ. ಆದರೆ ಕಡಿಮೆ ಊಟ ನೀಡಿದರೆ ಬಹಳ ಅತ್ತು ರಂಪಾಟ ಮಾಡತೊಡಗಿದ! ಹಾಗಾಗಿ ಅವರೂ ಯತ್ನ ಕೈಬಿಟ್ಟರು.

ಶಿಶುವಿಹಾರಕ್ಕೆ ನಡೆದು ಕೊಂಡು ಹೋಗಲು **ಲು ಹೋ** ಗೆ ಸ್ವಲ್ಪವೂ ಇಷ್ಟವಿಲ್ಲ. ಮೋಟರ್ ಸೈಕಲ್ ಮೇಲೆ ಕುಳಿತು ಹೋಗಲು ತುಂಬಾ ಖುಷಿ. ಈತನಿಗೆ ಸೂಪರ್ ಮ್ಯಾನ್ ಬೊಂಬೆಯೆಂದರೆ ಬಹಳ ಇಷ್ಟ. 'ನೀನೂ ಅವನ ತರಹ ಹಾರುತ್ತೀಯಾ?' ಎಂದು ಯಾರಾದರೂ ಕೇಳಿದರೆ, 'ಇಲ್ಲಪ್ಪ, ನಾನು ತುಂಬಾ ದಪ್ಪ' ಎಂದು ಮುದ್ದು ಮುದ್ದಾಗಿ ನುಡಿಯುತ್ತಾನೆ.

ಈತನನ್ನು ತಪಾಸಣೆ ಮಾಡಿದ ಡಾಕ್ಟರ್ 'ಈತನ ಹಾರ್ಮೋನ್‌ಗಳೆಲ್ಲಾ ಸಹಜ ಸ್ಥಿತಿಯಲ್ಲಿದೆ. ಯಾಕೆ ಈ ರೀತಿ ದಪ್ಪಗಾಗುತ್ತಿದ್ದಾನೆ ಎಂದು ಹೇಳುವುದು ಕಷ್ಟ' ಎಂದಿದ್ದಾರಂತೆ. 60 ಕೆ.ಜಿ ತೂಕದ ಮೂರು ವರ್ಷದ ಮಗನನ್ನು ಎತ್ತಿ ಮುದ್ದಾಡುವುದರಲ್ಲಿ ಅಪ್ಪ ಯುವಾನ್‌ಗೆ ಸುಸ್ತೋ ಸುಸ್ತು.

**■ ವಿದ್ಯಾ ಹಾಲಭಾವಿ**